(MR. DEPUTY SPEAKER)
which will come in course of payment during the year ending 31st day of March 1958 in respect of 'Capital Outlay on Improvement of Public Health'".

The motion was adopted.

Half-hour debate on Question No. 177 Re: Educated Unemployed in the State and the measures to solve their Problem.

ಶ್ರೀ ಎಂ. ಸಿ. ನರಸಿಂಹನ್ (ಕೋಲಾರ ಚಿನ್ನದ ಗಣಿಗಳು).—ಪ್ರಶ್ನೆ 177ಕ್ಕೆ ಕೊಟ್ಟಿರುವ ಉತ್ತರಗಳಿಗೆ ಸಂಬಂಧಿಸಿದ ವಿಚಾರವಾಗಿ ಮಾತನಾಡುತ್ತಾ, ಒಂದು ವಿಷಯವನ್ನು ಮೊದಲು ಅರಿಕೆ ಮಾಡಲು ಇಷ್ಟ ಪಡುತ್ತೇನೆ. ಈ ಸಮಸ್ಯೆಯ ಬಗ್ಗೆ ಮಂತ್ರಿಮಂಡಲವು ವಿಚಾರ ಮಾಡಿದಂತೆ ಕಾಣುವುದಿಲ್ಲ. ಈವರೆಗೆ ಹಿಂದೆ ಇದ್ದಂಥ ನೀತಿಯನ್ನೇ ಅನುಸರಿಸುತ್ತ ಬಂದಹಾಗೆ ಇದೆ. ಈ ಸಮಸ್ಯೆಗೆ ಸ್ಪಷ್ಟೀಕರಣವು ಬೇಕಾಗಿದೆ. ಈ ಸಮಸ್ಯೆಯ ಬಗ್ಗೆ ಸ್ಪಷ್ಟೀಕರಣ ಕೊಡತಕ್ಕಂಥ ಎರಡು ಮಾತು ನಾನು ಹೇಳುವುದನ್ನು ಸರಕಾರವು ಗಮನದಲ್ಲಿಟ್ಟುಕೊಳ್ಳುವುದೆಂದು ನಾನು ನಂಬಿದ್ದೇನೆ. 177 ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಮುಖ್ಯ ಮಂತ್ರಿಗಳವರು ಈ ವಿದ್ಯಾವಂತ ನಿರುದ್ಯೋಗ ಸಮಸ್ಯೆಯ ಬಗ್ಗೆ ಸರಕಾರಕ್ಕೆ ಎಷ್ಟು ಮಂದಿ ನಿರುದ್ಯೋಗಿಗಳು ಇದ್ದಾರೆ ಎಂಬುದೇ ಗೊತ್ತಿಲ್ಲ. ಈ ಬಗ್ಗೆ ಅಂಕಿ ಸಂಖ್ಯೆಗಳು ಎಷ್ಟು ಎಂಬುದು ಗೊತ್ತಿಲ್ಲ ಎಂದು ಹೇಳಿದ್ದಾರೆ. ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಷ್ಟು ಜನ ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ದೊರಕಿಸಿಕೊಡಲಕ್ಕೆ ಸಾಧ್ಯವಾಗುವುದು ಎಂಬ ಬಗ್ಗೆ ಅಂಕಿ ಸಂಖ್ಯೆಗಳ ಅಂದಾಜು ಇಲ್ಲ. ಇಂಥ ಸಂದರ್ಭದಲ್ಲಿ ಒಂದು ಯೋಜನೆಯು ಇಲ್ಲದಿರುವಾಗ ಈ ಸಮಸ್ಯೆಯನ್ನು ಮಂತ್ರಿಮಂಡಲದವರು ಹೇಗೆ ಬಗೆಹರಿಸುತ್ತಾರೋ ತಿಳಿಯುವುದಿಲ್ಲ. ಈ ಸಮಸ್ಯೆಯ ಅಂಕಿಅಂಶಗಳು ಇಲ್ಲದೇ ಇರುವಾಗ, ಒಂದು ಅಂದಾಜು ಇಲ್ಲದೇ ಇರುವಾಗ ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಪಂಚವಾರ್ಷಿಕ ಯೋಜನೆಯನ್ನು ಮಾಡಿದ್ದಾರೆ. ಪಂಚವಾರ್ಷಿಕ ಯೋಜನೆಯು ಪ್ರಾರಂಭವಾಗಿ ಆರು ವರ್ಷಗಳಾದರೂ ಈ ಸಮಸ್ಯೆ ಪರಿಹಾರವಾಗದೇ ಇರುವುದು ಆಶ್ಚರ್ಯಕರವಾಗುತ್ತದೆ. ಕನ್ನಡದಲ್ಲಿ ಒಂದು ಗಾದೆ ಇದೆ. ಊದೋ ಶಂಖಾ ಊದಿ ಬಿಡಬೇಕು, ಮಾದಪ್ಪನ ಜಾತ್ರೆ ಆಗಿಹೋಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಮಾದಪ್ಪನವರ ಕ್ಷಮೆ ಬೇಡುತ್ತೇನೆ. ಯಾಕೆಂದರೆ, ಇದು ಅವರಿಗೆ ಸಂಬಂಧಿಸಿದುದು ಅಲ್ಲ.

ಈಗಾಗಲೇ ಕೇಂದ್ರಸರ್ಕಾರದವರು ಎರಡನೆ ಪಂಚವಾರ್ಷಿಕ ಯೋಜನೆಯನ್ನು ರಚಿಸಿದ್ದಾರೆ. ಆದರೂ ಮೈಸೂರಿನಲ್ಲಿ ವಿದ್ಯಾವಂತರ ನಿರುದ್ಯೋಗ ಸಮಸ್ಯೆ ಬಗೆಹರಿಯುವುದೆಂಬುದು ಕೇವಲ ಒಂದು ಊಹೆ ಮತ್ತು ಕಲ್ಪನೆ. ಅದು ಬಹಳ ಶೋಚನೀಯವಾದ ವಿಚಾರ. ಕೇಂದ್ರಸರ್ಕಾರದ ಪಂಚವಾರ್ಷಿಕ ಯೋಜನೆಯಂತೆ ಸಾವಿರಾರು ಮಂದಿಗೆ ಉದ್ಯೋಗ ದೊರೆತಿದ್ದರೂ ಸಹ ಮೈಸೂರಿನಲ್ಲಿರುವ ಸಮಸ್ಯೆಯು ಅದೇ ಪ್ರಮಾಣದಲ್ಲಿ ಬಗೆಹರಿದೀತೆಂದು ಹೇಳುವುದು ಸರಿಯಿಲ್ಲ. ನಮ್ಮ ಆರ್ಥಿಕ ಸ್ಥಿತಿ ಇಂದು ಯೋಜನಾಬದ್ಧವಾಗಿದೆ ಎಂದು ಹೇಳುತ್ತೇವೆ. ಈಗಾಗಲೇ ನಾವು ಯೋಜನೆಯ ಆರನೆ ವರ್ಷದಲ್ಲಿದ್ದೇವೆ. ಅನೇಕ ಯೋಜನಾಬದ್ಧವಾದ ಕಾರ್ಯಕ್ರಮಗಳು ನಮ್ಮ ಮುಂದಿವೆ. ಆ ಕಾರ್ಯಕ್ರಮಗಳ ಬಗ್ಗೆ ಪೂರ್ಣವಾದ ಅಂಕಿಅಂಶಗಳು ಇರಬೇಕು ಸ್ಪಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದು ರೂಢಮೂಲವಾದ ವಿಷಯ. ನಮ್ಮ ಪಂಚವಾರ್ಷಿಕ ಯೋಜನೆಯನ್ನು ಮುಂದುವರಿಸತಕ್ಕ ಕ್ರಮ ಹೇಗೆ ಎಂಬುದು ಸರ್ಕಾರದವರಿಗೆ ಸರಿಯಾಗಿ ಗೊತ್ತಿಲ್ಲ ಎಂದು ಹೇಳಿದರೆ ಏನೂ ತಪ್ಪಾಗಲಾರದು. ಈ ಸಂದರ್ಭದಲ್ಲಿ ಅವರು ಖಂಡಿತವಾಗಿ ಒಂದು ಊಹೆ ಮತ್ತು ಒಂದು ಆಧಾರದ ಮೇಲೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುತ್ತೇವೆಂಬುದಾಗಿ ಹೇಳಿದ್ದಾರೆಂದು ನಾನು ಹೇಳಬಯಸುತ್ತೇನೆ. ಯೋಜನೆಯ ಆರನೆಯ ವರ್ಷದಲ್ಲಿ ಮೈಸೂರಿನ ಮುಖ್ಯಮಂತ್ರಿಗಳಿಗೆ ಅಂಕಿಅಂಶಗಳು ಗೊತ್ತಿಲ್ಲವೆಂದರೆ, ಎಷ್ಟು ಜನರಿಗೆ ಉದ್ಯೋಗ ನೊರಕುವುದೆಂದು ಹೇಳಲು ಸಾಧ್ಯವಿಲ್ಲ, ಎಷ್ಟು ನಿರುದ್ಯೋಗಿಗಳಿದ್ದಾರೆಂಬುದು ಗೊತ್ತಿಲ್ಲ ಎಂದು ಹೇಳಿದರೆ, ಅದು ಯೋಜನೆಗೇ ಅಪಹಾಸ್ಯವಾಗುತ್ತದೆ. ಅಂಕಿಅಂಶಗಳಿಲ್ಲದೆಯೇ ಸಮಸ್ಯೆ ಬಗೆಹರಿಯುತ್ತದೆಂದು ಹೇಳುತ್ತಿರುವುದು ಮುಖ್ಯಮಂತ್ರಿಗಳು "ಕತ್ತಲಲ್ಲಿ ಕರೀ ಬೆಕ್ಕನ್ನು ಹುಡುಕುವಂತೆ" ಆಗಿದೆ.

ಎರಡನೆಯದಾಗಿ ಖಾನಗೀ ಸಂಸ್ಥೆಗಳ ಮಾಲೀಕರು ಮಾಡತಕ್ಕ ಕಾರ್ಯಗಳನ್ನೂ ಸಹ ನಾವು ನೋಡಬೇಕು. ವಿದ್ಯಾವಂತರ ನಿರುದ್ಯೋಗ ಸಮಸ್ಯೆಯ ಕಾರ್ಯಕ್ರಮ ನಮ್ಮ ಮುಂದಿದೆ. ಇದೇ ಸಮಯದಲ್ಲಿ ವಿದ್ಯಾವಂತರ ನಿರುದ್ಯೋಗಿಗಳ ಸೈನ್ಯಕ್ಕೆ ದಿನೇ ದಿನೇ ಸರ್ಕಾರದವರೂ ಸೇರಿಸುತ್ತಿದ್ದಾರೆ. ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಾಗಿ ಬಾಯಿಯಲ್ಲಿ ಹೇಳಿಕೊಂಡೇ ಸರ್ಕಾರದವರೂ ಕೂಡ ರಿಟ್ರೆಂಚ್‌ಮೆಂಟಿಗೆ ಬೆಂಬಲವನ್ನು ಕೊಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಕೋಲಾರದ ಚಿನ್ನದ ಗಣಿಯೊಳಗೆ ತಾಂತ್ರಿಕ ಶಿಕ್ಷಣ ಪಡೆದಿರುವ 65 ಜನರನ್ನು ಇತ್ತೀಚೆಗೆ ಕೆಲಸದಿಂದ ತೆಗೆಯಲಾಗಿದೆ. ಅಲ್ಲಿ ನಾರ್ಮ್ಯೆದು ವರ್ಷಗಳಿಂದ ತರಹೇತು ಹೊಂದಿ ತಾಂತ್ರಿಕ ಜ್ಞಾನವನ್ನು ಪಡೆಯುವುದು ಬಹಳ ಕಷ್ಟ. ಅಂತಹವರನ್ನು ಇವೊತ್ತು ಡಿಸ್‌ಚಾರ್ಜ್ ಮಾಡುತ್ತಿದ್ದಾರೆ. ಅರಮನೆಯಲ್ಲಿ ಕೆಲಸಮಾಡುತ್ತಿದ್ದ 500 ಜನರನ್ನು ಹೊರದೂಡಲಾಗಿದೆ. ಇದೂ ಅಲ್ಲದೆ, ಕೇಂದ್ರಸರ್ಕಾರದ ನೇತೃತ್ವದಲ್ಲಿ ನಡೆಯುತ್ತಿರುವ ಕಾಫೀ ಬೋರ್ಡ್‌ನ್ನು ತೆಗೆದುಕೊಳ್ಳಿ, ಅಲ್ಲಿ ಕೆಲಸ ಮಾಡುತ್ತಿರುವ 150 ಜನರನ್ನು ಇದೇ ವಾರದಲ್ಲಿ ಹೊರದೂಡಿದ್ದಾರೆ. ಇದರಿಂದ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತೇ? ಈ ರೀತಿ ಮಾಡುವುದರಿಂದ ನಮ್ಮ ದೇಶದಲ್ಲಿ ತರಹೇತಾದ ನೌಕರರು ಸಿಕ್ಕುವುದು ಕಷ್ಟವಾಗುವುದಿಲ್ಲವೇ? ಇದರಿಂದ ನಿರುದ್ಯೋಗ ಸಮಸ್ಯೆ ಇನ್ನೂ ಬೆಳೆಯುವುದಕ್ಕೆ ಅವಕಾಶವಾಗುವುದಿಲ್ಲವೇ? ವಿದ್ಯಾವಂತರ ನಿರುದ್ಯೋಗ ಸಮಸ್ಯೆಯನ್ನು ತಡೆಗಟ್ಟುತ್ತೇವೆ ಎಂದು ಹೇಳುವ ಸರ್ಕಾರದ ಇಂತಹ ಕಾರ್ಯಕ್ರಮವನ್ನು ಒಪ್ಪುವುದಕ್ಕಾಗುತ್ತದೆಯೇ? ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ತಡೆಗಟ್ಟುವುದಕ್ಕೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಕಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಅದನ್ನು ಹೇಗೆ

ತಾನೇ ಒಪ್ಪುವುದು? ಮಾನ್ಯ ಮುಖ್ಯಮಂತ್ರಿಗಳು ಆದರ ಬಗ್ಗೆ ಅಂಕಿಅಂಶಗಳನ್ನು ಸ್ಪಷ್ಟವಾಗಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದರೆ ಪ್ರಯತ್ನಪಟ್ಟಿದ್ದಲ್ಲ ಅದು ಕಷ್ಟವಾಗುತ್ತಿರಲಿಲ್ಲ. 1955ನೆಯ ಇಸವಿಯಲ್ಲಿ ಕೇಂದ್ರಸರ್ಕಾರದ ನೇತೃತ್ವದಲ್ಲಿ 50 ಸಾವಿರಕ್ಕಿಂತ ಹೆಚ್ಚಾಗಿ ಜನಸಂಖ್ಯೆ ಇರುವ ನಗರಗಳಲ್ಲಿ ಒಂದು ಸರ್ವೆಯನ್ನೂ ಕೂಡ ನಡೆಸಲಾಯಿತು ಎಂದು ನಾನು ಕೇಳಿದ್ದೇನೆ. ಬೆಂಗಳೂರು ಕೂಡ ಅದರಲ್ಲಿ ಸೇರಿದೆಯೆಂದು ನನಗನ್ನಿಸುತ್ತದೆ. ನಮ್ಮ ಊರಿನಲ್ಲಿ ಬಹು ಹೆಚ್ಚಾದಂತಹ ಜನಸಂಖ್ಯೆ ಇದೆ. ಈ ತರಹ ಸಂದರ್ಭವಿರುವಾಗ ಅದನ್ನು ನೋಡಿದ್ದರಾದರೂ ಅಂಕಿಅಂಶ ಸಿಕ್ಕುತ್ತಿತ್ತು. ಈ ಪ್ರಶ್ನೆಯನ್ನು ಕೇಳಿದ್ದು ಸ್ವಲ್ಪ ಹೆಚ್ಚು ಕಡಿಮೆ ಸಮಸ್ಯೆ ಹೇಗಿದೆಯೆಂಬುದನ್ನು ತಿಳಿದುಕೊಳ್ಳುವುದಕ್ಕೆ. ಮಾನ್ಯ ಮುಖ್ಯಮಂತ್ರಿಗಳು ಆ ಮಾಹಿತಿಯನ್ನು ಕೊಡುವುದಕ್ಕೆ ನಿರಾಕರಿಸಿದರು. ಇವತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಈಗಿರುವ ನಿರುದ್ಯೋಗ ಸ್ಥಿತಿಯನ್ನು ಪ್ರಕಟಿಸಿದೆ. ಅದನ್ನು ನೋಡಿದರೂ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಾ ಇರುವುದು ಗೊತ್ತಾಗುತ್ತದೆ. ಮೈಸೂರು ರಾಜ್ಯದಲ್ಲಿ ನೆರೆ ರಾಷ್ಟ್ರಗಳಾದಂಥ ಕೇರಳ, ಮದರಾಸ್, ಬೊಂಬಾಯಿಗಳಿಗಿಂತ ನಮ್ಮಲ್ಲಿ ನಿರುದ್ಯೋಗಿಗಳ ಸಮಸ್ಯೆ ಬಹಳ ತೀವ್ರವಾಗಿದೆ ಎಂದು ಹೇಳಬಯಸುತ್ತೇನೆ. ಅಲ್ಲಿ ಎಷ್ಟು ಜನಕ್ಕೆ ಉದ್ಯೋಗ ದೊರಕಿಸಿಕೊಡಲು ಸಾಧ್ಯವಾಯಿತೋ ಅದೇ ಪ್ರಮಾಣದಲ್ಲಿ ನಮ್ಮಲ್ಲಿ ಸಾಧ್ಯವಾಗಲಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ಮೈಸೂರಿನಲ್ಲಿ ವಿದ್ಯಾವಂತರು 50,908 ಜನ ನಿರುದ್ಯೋಗಿಗಳು ರಿಜಿಸ್ಟರಾಗಿದ್ದಾರೆ ಎಂಬುದು ಲೈವ್ ರಿಜಿಸ್ಟರ್‌ನಿಂದ ಜೂ 1956ರವರೆಗೆ ನಿಖರವಾಗಿ ಗೊತ್ತಾಗುತ್ತದೆ. ಇದು ಅಷ್ಟು ಸರಿಯಾಗಿಲ್ಲದಿದ್ದರೂ ಒಂದು ಚಿತ್ರವನ್ನು ಕೊಡುತ್ತದೆ. ಅದರಲ್ಲಿ ಕೆಲಸ ಸಿಕ್ಕಿರುವವರು 4,125 ಜನರು. ಶೇಕಡ ಎಂಟರಷ್ಟು ಜನರಿಗೆ ಮಾತ್ರ ಕೆಲಸ ಸಿಕ್ಕಿದೆ. ಮದರಾಸಿನಲ್ಲಿ ಎಜುಕೇಟೆಡ್ ಪರ್ಸನ್ಸ್ 1,33,700. ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕಿರುವುದು 24,802 ಜನರಿಗೆ ಮಾತ್ರ. ಅಂದರೆ ಶೇಕಡ 18·4 ಆಯಿತು. ಕೇರಳದಲ್ಲಿ ವಿದ್ಯಾವಂತರ ನಿರುದ್ಯೋಗ ಸಮಸ್ಯೆ ತೀವ್ರವಾಗಿದೆ, ಅಲ್ಲಿ ಎಜುಕೇಟೆಡ್ ಪರ್ಸನ್ಸ್ 52,298. ಕೆಲಸ ಸಿಕ್ಕಿರುವುದು 4,986 ಜನರಿಗೆ ಮಾತ್ರ. ಅಂದರೆ ಶೇಕಡ 9·3 ಆಯಿತು. ಬೊಂಬಾಯಿನಲ್ಲಿ ಲೈವ್ ರಿಜಿಸ್ಟರ್‌ನಲ್ಲಿ ಎಜುಕೇಟೆಡ್ ಪರ್ಸನ್ಸ್ 1,83,470 ಜನ ರಿಜಿಸ್ಟರ್ ಆಗಿದ್ದಾರೆ. ಅವರಲ್ಲಿ ಕೆಲಸ ದೊರೆತದ್ದು ಕೇವಲ 21,868 ಜನರಿಗೆ ಮಾತ್ರ. ಅದು ಶೇಕಡ 11·8 ಆಯಿತು. ಇನ್ನು ಇಡೀ ಹಿಂದೂ ದೇಶದ ನರಾನರಿಯನ್ನು ತೆಗೆದುಕೊಂಡರೆ ಲೈವ್ ರಿಜಿಸ್ಟರ್‌ನಲ್ಲಿ ಎಜುಕೇಟೆಡ್ ಪರ್ಸನ್ಸ್ 13,57,413 ಇದ್ದಾರೆ. ಅದರಲ್ಲಿ 1,55,348 ಜನರಿಗೆ ಮಾತ್ರ ಕೆಲಸ ಸಿಕ್ಕಿದೆ. ಅಂದರೆ ಶೇಕಡ 11·4ರಷ್ಟು ಆಯಿತು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನವರು ಕೊಟ್ಟಿರುವ ಪಂಖ್ಯೆಗಳು 1955ಕ್ಕೆ ಸಂಬಂಧಿಸಿದ್ದು. ಆಲ್ ಇಂಡಿಯಾ ಆವರೇಜ್ ಪ್ರಕಾರ ನೆರೆ ಪ್ರಾಂತಗಳಿಗಿಂತ ಕೆಲಸ ಸಿಕ್ಕಿರುವ ಶೇಕಡ ನಮ್ಮದು ಬಹಳ ಕಡಮೆ. ಆದ್ದರಿಂದ ಮೈಸೂರು ರಾಜ್ಯದಲ್ಲಿ ನೆರೆರಾಜ್ಯಗಳಿಗಿಂತ ವಿದ್ಯಾವಂತರ ನಿರುದ್ಯೋಗ ಸಮಸ್ಯೆ ಬಹಳ ತೀವ್ರವಾಗಿದೆ ಈ ಅಂಕಿಅಂಶಗಳು ಹಳೆಯ ಮೈಸೂರಿಗೆ ಅನ್ವಯಿಸುತ್ತದೆ. ಇನ್ನು ಈ ಅಂಕಿಅಂಶಗಳನ್ನು ಹೊಸ ಮೈಸೂರಿಗೆ ತೆಗೆದುಕೊಂಡು ಹೋಲಿಸಿದ್ದೇ ಆದರೆ, ಈ ವಿದ್ಯಾವಂತರ ನಿರುದ್ಯೋಗ ಸಮಸ್ಯೆಯು ಇನ್ನೂ ಚಿಂತಾಜನಕ ಪರಿಸ್ಥಿತಿಯಲ್ಲಿದೆಯೆಂದು ಹೇಳಬಯಸುತ್ತೇನೆ.

ಇದೇ ಸಂದರ್ಭದಲ್ಲಿ ಗ್ರಾಜುಯೇಟ್ಸ್ ವಿಚಾರ ತೆಗೆದುಕೊಂಡರೆ ಮತ್ತೂ ಪರಿಸ್ಥಿತಿ ಬಿಗಡಾಯಿಸಿಕೊಂಡಿದೆ ಎಂದು ಹೇಳಬಯಸುತ್ತೇನೆ. ಮೈಸೂರು ರಾಜ್ಯದಲ್ಲಿರತಕ್ಕ ಪರಿಸ್ಥಿತಿ ನೋಡಿದರೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಜನವರಿ 1953ನೇ ಇಸ್ವಿಯಿಂದ 1956ನೇ ಇಸ್ವಿಯ ವರೆವಿಗೂ ಅಂಕಿ ಅಂಶಗಳ ಪ್ರಕಾರ ಮೈಸೂರು ರಾಜ್ಯದಲ್ಲಿ 7,765 ಜನ ಗ್ರಾಜುಯೇಟ್ಸ್ ಎಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಇದರಲ್ಲಿ ಕೆಲಸ ಸಿಕ್ಕಿದ್ದು 703 ಜನಗಳಿಗೆ ಈ ಪ್ರಕಾರ 9 ಪರ್‌ಸೆಂಟ್ ಆಯಿತು. ಅದೇ ಸಮಯದಲ್ಲಿ ಮದರಾಸಿನಲ್ಲಿ 12,519 ಜನ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರಾಗಿದ್ದಕ್ಕೆ 3,141 ಜನಗಳಿಗೆ ಕೆಲಸ ಸಿಕ್ಕಿದೆ ಇಲ್ಲಿಯ ಪರ್‌ಸೆಂಟೇಜ್ 25. ಕೇರಳದಲ್ಲಿ 4,139 ಜನಗಳಲ್ಲಿ 490 ಜನಗಳಿಗೆ ಕೆಲಸ ಸಿಕ್ಕಿದೆ ಇದು 11·2 ಪರ್‌ಸೆಂಟ್ ಆಯಿತು. ಬೊಂಬಾಯಿನಲ್ಲಿ 23,376 ಜನಗಳಿಗೆ 2,911 ಜನಗಳಿಗೆ ಕೆಲಸದೊರಕಿಸಿಕೊಟ್ಟಿದ್ದಾರೆ. ಗ್ರಾಜುಯೇಟ್ಸ್ ಕಡೆ ನೋಡಿದರೆ ಕೇವಲ ಶೇಕಡ 9 ಜನಕ್ಕೆ ಇವೊತ್ತು ಇಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ಕೆಲಸ ದೊರಕಿಸಿಕೊಡಲಾಗಿದೆ. ಆಲ್‌ಇಂಡಿಯಾ ಆವರೇಜ್ ತೆಗೆದುಕೊಂಡರೆ ಶೇಕಡ 12 ಆಗುತ್ತದೆ. ಇದರಲ್ಲಿ ರಿಜಿಸ್ಟರ್ ಆಗದೆ ಇದ್ದವರು ಸೇರಿಲ್ಲ. ನಮ್ಮಲ್ಲಿ ಸಮಸ್ಯೆ ಎಷ್ಟು ತೀವ್ರವಾಗಿದೆ, ಎಷ್ಟು ಬಿಗಡಾಯಿಸಿಕೊಂಡಿದೆ ಎನ್ನುವ ಅರಿವು ಸರ್ಕಾರಕ್ಕೆ ಬರಲಿ ಎನ್ನುವ ದೃಷ್ಟಿಯಿಂದ ಅಂಕಿಅಂಶಗಳನ್ನು ತಮ್ಮ ಮುಂದೆ ಇಡಲು ಪ್ರಯತ್ನಪಟ್ಟಿದ್ದೇನೆ. ಪ್ರತಿವರ್ಷ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಬರುವ ಸಂಖ್ಯೆಗಳು ಸರಿಯಾದ ಅಂಕಿಅಂಶಗಳಲ್ಲ. ಯಾಕೆಂದರೆ ಇಲ್ಲಿ ಎಲ್ಲರೂ ಕಡ್ಡಾಯವಾಗಿ ರಿಜಿಸ್ಟರ್ ಮಾಡಬೇಕು ಎನ್ನುವ ಶಾಸನವಿಲ್ಲ. ಮನಸ್ಸು ಬಂದವರು ಹೋಗುತ್ತಾರೆ. ಇಲ್ಲದಿದ್ದವರು ಹೋಗುವುದಿಲ್ಲ. ವಿದ್ಯಾವಂತರಾದವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೆ ಹೋಗುವುದಿಲ್ಲ. ಹಳೆಯ ಮೈಸೂರು ರಾಜ್ಯದಲ್ಲಿ ಮೆಟ್ರಿಕ್ಯುಲೇಷನ್ ಪಾಸು ಮಾಡಿದವರ ಅಂಕಿಅಂಶಗಳನ್ನು ತೆಗೆದುಕೊಂಡರೆ 16,761 ಆಗುತ್ತದೆ. ಇದು ಮಾರ್ಚಿ 1957ನೇ ಇಸ್ವಿಗೆ ಸಂಬಂಧಪಟ್ಟದ್ದು. ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಂಡರೆ, ಒಟ್ಟು 32 ಸಾವಿರ. ಹೊಸ ಮೈಸೂರಿಗೆ ಅನ್ವಯಿಸಿದರೆ ಆ ಸಂಖ್ಯೆ ದಬ್ಬಲ್ ಆಗುತ್ತದೆ. ಹೀಗೆ ನುಮಾರು 64 ಸಾವಿರ ಜನ ವಿದ್ಯಾವಂತರು ಪ್ರತಿ ವರ್ಷ ನಿರುದ್ಯೋಗಿಗಳ ಸಂಖ್ಯೆಗೆ ಸೇರುತ್ತಾರೆಂದು ಹೇಳಬೇಕಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳುವಾಗ ಕೇವಲ ಮಾನವೀಯ ದೃಷ್ಟಿಯಿಂದ ಮಾತ್ರ ಹೇಳುತ್ತಿಲ್ಲ ಯಾರು ಅನ್‌ಎಂಪ್ಲಾಯಡ್ ಆಗಿದ್ದಾರೋ ಅವರಿಗೆ ಅದರ ಕಷ್ಟ ಗೊತ್ತಾಗುತ್ತದೆ. ಶಾಸನ ಸಭಾ ಸದಸ್ಯರು ಯಾರು ಯಾರು ಮಂತ್ರಿಗಳಾಗಬೇಕೆಂದು ಪ್ರಯತ್ನ ಪಟ್ಟು ಆಗದೆ ಇದ್ದವರ ಮುಖ ನೋಡಿ, ಮಂತ್ರಿಗಳು ಯಾರು ಯಾರು ಆಗಿದ್ದಾರೋ ಅವರ ಮುಖ ನೋಡಿ, ಈ ಶಾಸನ ಸಭಾಸದಸ್ಯರ ಮುಖ ನೋಡಿ, ಶಾಸನ ಸಭೆಗೆ ನಿಂತು ಸೋತುಹೋದವರ ಮುಖ ನೋಡಿ ಗೊತ್ತಾಗುತ್ತದೆ. ಅದು ಪರ್ಸನಲ್ ಎಕ್ಸ್‌ಪೀರಿಯನ್ಸ್. ನನ್ನ ಅನುಮಾನಗಳು ತಪ್ಪೆಂದು ರುಜು

(ಶ್ರೀ ಎಂ. ಸಿ. ನರಸಿಂಹನ್)

ಪಾತಾದರೂ ''ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮಾಧ್ಯಮಿಕ ಶಿಕ್ಷಣದಲ್ಲಿ ಉತ್ತೀರ್ಣರಾದವರಲ್ಲಿ ಕೇವಲ ಶೇಕಡ ಹತ್ತು ಮಂದಿ ಮಾತ್ರ ತಾಂತ್ರಿಕ ಅಥವಾ ಇತರ ಔದ್ಯೋಗಿಕ ಶಿಕ್ಷಣ ಪಡೆಯಲು ಹೋಗುತ್ತಾರಷ್ಟೆ'' ಎಂದು ಪ್ರೊ. ಜೆ. ಸಿ. ಘೋಷ್‌ರವರು ಹೇಳಿದ್ದಾರೆ. ಈ ಸಮಸ್ಯೆಯನ್ನು ರಾಷ್ಟ್ರದ ಹಿತದೃಷ್ಟಿಯಿಂದ ನೋಡಿದರೆ ಅದರಲ್ಲಿ ದೊಡ್ಡ ನಷ್ಟವಾಗಿದೆ ಎಂದು ಗೊತ್ತಾಗುತ್ತದೆ. ನ್ಯಾಷನಲ್ ಪ್ಲಾನಿಂಗ್ ಕಮಿಟಿಯವರು ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇರುವುದರಿಂದ ರಾಷ್ಟ್ರೀಯ ಉತ್ಪತ್ತಿಯಲ್ಲಿ 3,551 ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಆದ್ದರಿಂದ ಈ ಸಮಸ್ಯೆಯನ್ನು ಮಾನವೀಯ ದೃಷ್ಟಿಯಿಂದ ಮಾತ್ರ ನೋಡಬಾರದು. ಇದನ್ನು ರಾಷ್ಟ್ರದ ಹಿತದೃಷ್ಟಿಯಿಂದ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸಬೇಕು ಎನ್ನುವ ದೃಷ್ಟಿಯಿಂದ ನೋಡಬೇಕು. Un-employment and under employment constitute a greater source of danger in the country. ಅನ್ ಎಂಪ್ಲಾಯ್‌ಮೆಂಟ್‌ನಲ್ಲಿ ಡಿಸ್‌ಗೈಸ್ಡ್ ಅನ್ ಎಂಪ್ಲಾಯ್‌ಮೆಂಟ್ ಸೇರಿಸಿಲ್ಲ, ಅದನ್ನು ಸೇರಿಸಿದರೆ ಮತ್ತಷ್ಟು ತೀವ್ರವಾಗುತ್ತದೆ. ಮತ್ತು ಎರಡನೆಯದು, ಇದನ್ನು ಹೇಳುವಾಗ ಒಂದೇ ದಿವನದಲ್ಲಿ ಈ ಸಮಸ್ಯೆಯನ್ನು ದೇಶದಲ್ಲಿ ಬಗೆ ಹರಿಸಬೇಕೆಂದು ನಾನು ಹೇಳುತ್ತಿಲ್ಲ. ಆರೀತಿ ಸರ್ಕಾರ ಕಾರ್ಯಕ್ರಮ ಹಾಕಿ ಬಗೆಹರಿಸುವುದಕ್ಕಾಗುತ್ತಿತ್ತು ಎಂದು ಟೀಕೆ ಮಾಡುತ್ತಿಲ್ಲ. ಆದರೆ ಕಾರ್ಯಕ್ರಮ ಯಾವರೀತಿ ಇದೆಯೆಂದು ಸ್ಪಷ್ಟಪಡಿಸಬೇಕೆಂದು ಕೇಳುತ್ತಿದ್ದೇನೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 14 ಲಕ್ಷ ಜನರಿಗೆ ಕೆಲಸ ಕೊಡಲು ಅಂದಾಜು ಮಾಡಿದೆಯೆಂದು ಮಂತ್ರಿಗಳು ಹೇಳಿದರು. 20 ಲಕ್ಷ ನಿರುದ್ಯೋಗಿಗಳಿರುವ ಕಡೆ 14 ಲಕ್ಷ ನಿರುದ್ಯೋಗಿಗಳಿಗೆ ಕೆಲಸ ಕೊಡಬಹುದಾದರೂ ಆರು ಲಕ್ಷ ನಿರುದ್ಯೋಗಿಗಳು ಉಳಿಯುತ್ತಾರೆ. ಆದರೆ ನಮ್ಮ ಮೈಸೂರಿಗೆ ಅದರಿಂದ ನಾಕಷ್ಟು ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದು ತಾವು ಯೋಜನೆಯನ್ನು ಯಾವ ರೀತಿ ರೂಪಿಸಿದ್ದೀರೋ ಅದರ ಮೇಲೆ ಅವಲಂಬಿಸಿದೆ. ಅಮೇರಿಕಾದಲ್ಲಿ ಎಸ್ಟಿಮೇಟ್ ಎನ್ನುವುದಕ್ಕೆ ಬದಲಾಗಿ ಗೆಸ್ + ಎಸ್ಟಿಮೇಟ್ = ಗೆಸ್ಟಿಮೇಟ್ ಎಂದು ಹೇಳುತ್ತಾರೆ. ಇದು ಸ್ಕೆಂಟಿಫಿಕ್‌ವಾಗಿಲ್ಲ.

ಪಂಚವಾರ್ಷಿಕ ಯೋಜನೆ ಲೆಕ್ಕ ತೆಗೆದುಕೊಂಡರೆ ಅದರಲ್ಲಿ ಎರಡು ಮೂರು ತಪ್ಪುಗಳಿವೆ. ಒಂದನೆಯದು ಎಸ್ಟಿಮೇಟ್ ಮಾಡಿರುವುದು presumption ಮೇಲೆ. ಟೆಕ್ನಿಕಲ್ ಡೆವಲಪ್‌ಮೆಂಟ್ ಹೇಗೆ ಆಗಬಹುದೆಂದು ಅಂದಾಜುಮಾಡಲಾಗಿಲ್ಲ. ಅದು ಬಹಳ ಮಟ್ಟಿಗೆ ಮುಂದುವರಿಯುತ್ತದೆ. ಈ ದಿವನದ ಟೆಕ್ನಿಕಲ್ ಡೆವಲಪ್‌ಮೆಂಟ್ ಹಾಗೆಯೇ ಉಳಿಯುತ್ತದೆಂಬುದು ಸರಿಯಲ್ಲ. ಒಂದು ಉದಾಹರಣೆ ಕೊಡುತ್ತೇನೆ. ತಾತಾ ಐರ್ ಅಂಡ್ ಸ್ಟೀಲ್‌ವರ್ಕ್ಸ್‌ನಲ್ಲಿ ಮೊದಲು ಒಂದು ಮಿಲಿಯನ್ ಟನ್‌ಗಳ ಉತ್ಪತ್ತಿಯಿತ್ತು, 35 ಸಾವಿರ ಜನ ಕೆಲಸ ಮಾಡುತ್ತಿದ್ದರು. ಈಗ ಭಿಲಾಯ್ ಸ್ಟೀಲ್ ಪ್ಲಾಂಟ್‌ನಲ್ಲಿ ಜಾಸ್ತಿ ಖರ್ಚಿದೆ. ಆದರೂ ಎಂಪ್ಲಾಯ್‌ಮೆಂಟ್ ಪೊಟೆಷಿಯಲ್ ಕೇವಲ ಒಂಭತ್ತು ಸಾವಿರ ಜನಕ್ಕೆ ಮಾತ್ರ. ಇನ್ನು ಮೇಲೆ ಟೆಕ್ನಿಕಲ್ ಡೆವಲಪ್‌ಮೆಂಟ್ ಮುಂದುವರಿದು ಜಾಸ್ತಿ ಜನರನ್ನು ತೆಗೆದುಕೊಳ್ಳುವುದಿಲ್ಲ. ಲೇಬರ್ ಇಂಟೆನ್ಸಿವ್, ಕ್ಯಾಪಿಟಲ್ ಇಂಟೆನ್ಸಿವ್ ಒಂದು ರೀತಿ ಆಗುತ್ತದೆ. ಎರಡನೆಯದಾಗಿ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೊಂದು ತಪ್ಪುಮಾಡಿದ್ದಾರೆ, ಹಿಂದೂ ನಕ್ಸೆಷ್ ಆಕ್ಟ್ ಪ್ರಕಾರ ಪರಿಣಾಮವೇನೆಂದು ಲೆಕ್ಕಹಾಕಿಲ್ಲ. ಪಾಯಿಂಟ್ ಫ್ಯಾಮಿಲಿ ಸಿನ್ಡ್ರಂ ಎಂದೇನು ನಮ್ಮಲ್ಲಿದೆ ಅದು ನಮ್ಮಲ್ಲಿ disgnised ಅನ್-ಎಂಪ್ಲಾಯ್‌ಮೆಂಟಿಗೆ ಅವಕಾಶ ಕೊಟ್ಟಿದೆ.

Sri K. PUTTASWAMY (Mysore).— I rise to a point of order. The provision for half-an-hour discussion is meant only to elicit further information and the Member who raises a discussion can make only a statement and not deliver a lecture and the Minister concerned will have to make a short reply. The Hon'ble Member Sri Narasimhan is now delivering a big lecture. I just want the Chair to give a ruling in this matter.

Mr. DEPUTY SPEAKER.— There are still five minutes more. Let us see.

Sri K. PUTTASWAMY.—Half-an-hour discussion implies that the discussion should be over within half-an-hour and is meant not only for the member raise to the discussion but also for the Minister to reply. The Hon'ble Member has now spoken for nearly 25 minutes and at this rate the discussion will go on beyond half-an-hour. It is for the Chair to decide.

Mr. DEPUTY SPEAKER.—I would request the Hon'ble Member Sri Narasimhan to conclude his speech.

Sri M. C. NARASIMHAN.—I want clarification in respect of that matter because certain statements were made the other day.

Mr. DEPUTY SPEAKER.—I would allow him only two minutes more and he may finish.

Sri M. C. NARASIMHAN.—I shall finish.

ಪಂಚವಾರ್ಷಿಕ ಯೋಜನೆಯಾದರೂ ಕೂಡ ಕೆಲವು ಸಲಹೆಗಳನ್ನು ಕೊಟ್ಟಿದೆ. ಆ ಸಲಹೆಗಳು ಮೈಸೂರು ಸರ್ಕಾರದ ಪ್ಲಾನ್‌ನಲ್ಲಿ ಅಡಕವಾಗಿವೆಯೆ, ಅದರ ಪರಿಣಾಮವೇನು ಎಂಬುದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರೆ ಉತ್ತಮ. ಈ ಕೆಲವು ಮೆಷರ್ಸ್ ಹೇಳಲ್ಪಟ್ಟಿವೆ. Manufacturing industries-hand tools, small tools, furniture, sports goods, ಈ ತರಹ ಕೈಗಾರಿಕೆಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿಲ್ಲ. ಎರಡನೆಯದು ಫೀಡರ್ ಇಂಡಸ್ಟ್ರೀಸ್.— Foundries, forge shops, machinery parts, tool and gauges making and auto shops, electro-lating, galvanizing—ಈ ತರಹದ ಕೈಗಾರಿಕೆಗಳಿವೆಯೆ

ಎಂದರೆ ಅದೂ ಇಲ್ಲ. ದಂಡೇಲಯಲ್ಲಿ ಪೇಪರ್ ಇಂಡಸ್ಟ್ರಿಯಿದೆ. ಅದು ಈ ಸಮಸ್ಯೆಯನ್ನು ಸಾಕಷ್ಟು ಬಗೆಹರಿಸುವುದಕ್ಕೆ ಅನುಕೂಲವಾಗುತ್ತದೆಯೆಂದು ಒಪ್ಪುತ್ತೇನೆ.

ಆದರೆ ಈ ವಿಶೇಷ ಸಮಸ್ಯೆಯ ವಿಷಯದಲ್ಲಿ efficient ಆಗಿ ಕೆಲಸಮಾಡಿಲ್ಲ, ಇದರಲ್ಲಿ ಯಾವ ರೀತಿಯಾದ Servicing Industriesಗಳಿರುವುದು ಯಾವುದೂ ಕಾಣುವುದಿಲ್ಲ. ಅಲ್ಲದೆ Feeder industries ವಿಷಯವಾಗಿ ಹೇಳಬೇಕಾಗಿದೆ. ಅಲ್ಲದೆ work orientation centresಗಳಿರಬೇಕು. ಇದಕ್ಕೆ ತಕ್ಕ ಹಾಗೆ ವಿದ್ಯಾರ್ಥಿಗಳನ್ನು ತರಬೇತು ಮಾಡಲು ಅವರ General Education ಕೂಡ ಸರಿಯಾಗಿಲ್ಲ. ಇದರಿಂದ ಈಗ ಏನಾಗಿದೆ ಎಂದರೆ ಇರತಕ್ಕ ಕೆಲಸಗಳಿಗೆ ತರಬೇತಿ ಹೊಂದಿದ ಜನಗಳು ಸಿಗುವುದಿಲ್ಲ. ಇದಕ್ಕೆ ತಕ್ಕಂತೆ work re-orientation centres ಗಳನ್ನು ಏರ್ಪಾಡು ಮಾಡಬೇಕು. ಅಲ್ಲದೆ ನಾವು ಏನೇನು ಸಲಹೆಗಳನ್ನು ಕೊಟ್ಟಿದ್ದರೂ ಅದು ಕಾರ್ಯಗತವಾಗುತ್ತಿಲ್ಲ. ಅಲ್ಲದೆ ಈಗ ಈ ಪಾಂಚವಾರ್ಷಿಕ ಯೋಜನೆಯಶಸ್ವಿಯಾಗಬೇಕಾದರೆ ದೇಶದಲ್ಲಿರುವ ನಿರುದ್ಯೋಗಿಗಳ ಸಂಖ್ಯೆಯನ್ನ ತಡೆಗಟ್ಟಬೇಕು. ಈಗ ಪಾಂಚವಾರ್ಷಿಕ ಯೋಜನೆಯು ಮುಗಿದು ಆರನೆಯ ವರ್ಷ ಪ್ರಾರಂಭವಾಗಿದೆ. ಆದರೂ ಸರಕಾರ ತೀವ್ರಗತಿಯಿಂದ ಈ ನಿರುದ್ಯೋಗ ನಿವಾರಣೆ ವಿಷಯದಲ್ಲಿ ತಕ್ಕ ಕ್ರಮಗಳನ್ನು ಕೈಗೊಂಡಿಲ್ಲ. ಸರಿಯಾದ ಅಂಕಿ ಅಂಶಗಳೂ ಕೂಡ ಗೊತ್ತಾಗುವುದಿಲ್ಲ. ಇದು ಹೇಗಿದೆ ಎಂದರೆ "ಕಗ್ಗತ್ತಲೆಯಲ್ಲಿ ಕಪ್ಪು ಬೆಕ್ಕನ್ನು ಹುಡುಕಿದಂತಾಗಿದೆ" ಈ ವಿಷಯದಲ್ಲಿ ಅಂಕಿ ಅಂಶಗಳನ್ನು ಕಲೆಹಾಕಲು ಸರಿಯಾದ Statistical Survey ಕೂಡ ಮಾಡಿಲ್ಲ. ಸರಿಯಾದ ಒಂದು vital statistics Departmentನ್ನು ತೆರೆದು ಅಂಕಿ ಅಂಶಗಳನ್ನು ಸಂಗ್ರಹಿಸಿಡಬೇಕು. ಹೀಗೆ Special Statistical Survey ಮಾಡಿ ಅಂಕಿ ಅಂಶಗಳನ್ನು ಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದರು. ಅದು ಇನ್ನೂ ನಮಗೆ ಸಿಕ್ಕಿಲ್ಲ. ಬಜೆಟ್ಟಿನ ಮೆಮೊರ್ಯಾಂಡಂ ನಲ್ಲಿ, ಪಾಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳ ಪಟ್ಟಿಯನ್ನು ಹಂಚುವಾಗ ಈ ವಿಷಯದ ಬಗ್ಗೆಯೂ ಏನನ್ನೂ ಹೇಳಿಲ್ಲ. ಆದಕಾರಣ ಸರಕಾರದ ಸ್ಪಷ್ಟವಾದ ಧೋರಣೆ ಏನಿದೆ ಎಂಬುದನ್ನು ತಿಳಿಸಬೇಕು. ಮತ್ತು ಈ ಸಮಸ್ಯೆಯನ್ನು ಬಗೆಹರಿಸಲು ಏನುಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ.

*ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).- ಸ್ವಾಮಿ ಶ್ರೀ ನರಸಿಂಹನ್ ಅವರು ಬಹಳ ಸ್ವಾರಸ್ಯವಾಗಿ ಭಾಷಣಮಾಡಿದರು. ದೊಡ್ಡ ಭಾಷಣ ಮಾಡದೆ ಸರಕಾರದವರು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಬಹುಶಃ ಅಂಕಿ ಅಂಶಗಳನ್ನು ಕೇಳುವ ಅವಕಾಶವನ್ನು ಒಂದು ರೀತಿಯಾದ ರಾಜಕೀಯದಲ್ಲಿ ಉಪಯೋಗಿಸುವ ಸಲುವಾಗಿ ಈ ಚರ್ಚೆ ಎತ್ತಿದ ಹಾಗೆ ಕಾಣುತ್ತದೆ. ಏಕೆಂದರೆ ಇದರಲ್ಲಿ ಒಂದೂ ರಚನಾತ್ಮಕವಾದ ಸಲಹೆ ಬರಲಲ್ಲ. ಸರಕಾರದವರು ಹೀಗೆ ಮಾಡಿಲ್ಲ, ಹಾಗೆ ಮಾಡಿಲ್ಲ ಎಂದು ಹೇಳುತ್ತ ನನಗೇ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಋಣಿಯಾಗಿದ್ದೇನೆ. ಒಂದು ವಿಚಾರ ಹೇಳುತ್ತೇನೆ. ಸರಕಾರದವರು ಕತ್ತಲಲ್ಲಿ ಇದ್ದಾರೆ ಎಂದು ಹೇಳಿದರು. ಕತ್ತಲಲ್ಲೇ ಏಕೆ ಕಗ್ಗತ್ತಲನಲ್ಲದ್ದಾರೆ. ಅಲ್ಲದೆ ಒಂದು ರೀತಿಯಲ್ಲಿ ಎಲ್ಲರೂ ಬಹಳ ದಿವಸಗಳಿಂದಲೂ ಏಕೆ, ಶತಮಾನಗಳಿಂದಲೂ ಕಗ್ಗತ್ತಲೆಯಲ್ಲಿಯೇ ಇದ್ದಾರೆ. ಇದು ಇವೊತ್ತಿನ ದಿವಸ ಬಂದದ್ದೇನೂ ಅಲ್ಲ. ಈಗತಾನೇ ಕೊಂಚ ಬೆಳಕು ಅಲ್ಲಿಇಲ್ಲಿ ಕಾಣಿಸುತ್ತಿದೆ. ಆದ್ದರಿಂದಲೇ ತಕ್ಕಮಟ್ಟಿಗೆ ಅಂಕಿಅಂಶಗಳನ್ನು ಸಂಗ್ರಹಿಸಲು ಪ್ರಯತ್ನಗಳು ನಡೆಯುತ್ತಿವೆ. ಈ ಸಮಸ್ಯೆ ಅಂತಹದು. ಈಗ ದೇಶದಲ್ಲಿ ದೊಡ್ಡದೊಡ್ಡ ಡಿಸ್ಟ್ರಿಕ್ಟುಗಳಲ್ಲಿ employment exchangeಗಳಿವೆ. ಅವುಗಳಲ್ಲಿ ಅಂಕಿಅಂಶಗಳನ್ನು ಕಲೆಹಾಕುವ ಪ್ರಯತ್ನ ನಡೆದಿದೆ. ಇದೇ ರೀತಿಯಾಗಿ ಬೆಂಗಳೂರಿನಲ್ಲಿಯೂ ಇರುವ employment exchangeನಲ್ಲಿ ಕೆಲಸ ನಡೆಯುತ್ತಿದೆ. ಹೀಗೆ ಈಗ ಹೇಳಿರುವ ರೀತಿಯಲ್ಲಿ ಹೇಳದೆ ಸುಮ್ಮನೆ ಈಗ ಸರಕಾರ ಈ ವಿಚಾರದಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆಸುತ್ತಿದೆ ಎಂದು ಕೇಳಿದ್ದರೆ ನಾನೇ ಆಗಲೇ ಉತ್ತರ ಕೊಡುತ್ತಿದ್ದೆ. ಈ ರೀತಿಯ ಕೆಲಸಗಳು 1955ನೇ ಇಸವಿಯಿಂದಲೇ ನಡೆಯುತ್ತಿವೆ. ಇದರಲ್ಲಿ ಓದಿರುವವರ ಸಂಖ್ಯೆ ಎಂದರೆ S.S.L.C. ಪಾಸು ಮಾಡಿರುವವರು, ಗ್ರಾಜ್ಯುಯೇಟುಗಳಾಗಿರುವವರು ಇವರ ಸಂಖ್ಯೆಗಳನ್ನು ನೋಡಿದರೆ ಹೆಚ್ಚು ವಿದ್ಯಾವಂತರಲ್ಲದವರು ಶೇಕಡ 42.4, S.S.L.C. ಪಾಸು ಮಾಡಿರುವವರು ಶೇಕಡ 25.2 Intermediate ಶೇಕಡ 5.9 Graduateಗಳು ಶೇಕಡ, 9.4 ಹೀಗಿದೆ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ವಿಶೇಷವಾಗಿ ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಈಗ ವಿದ್ಯಾವಂತರಾದ ಜನಗಳಿಗೆ ಕೆಲಸ ಸಿಗುವುದಿಲ್ಲ ಎಂದು ಒಂದು Slogan ಎತ್ತಿಕೊಂಡು ಇಲ್ಲಿ ಹೇಳಿದರೆ, ಅದನ್ನು ಜನ ನಂಬುತ್ತಾರೆ. ಆ ರೀತಿ ನಂಬುವ ಜನಗಳಿದ್ದಾರೆ. ಏಕೆಂದರೆ ಈಗ ವಿದ್ಯಾವಂತರಲ್ಲದ ನಿರುದ್ಯೋಗಿಗಳ ಸಂಖ್ಯೆಯೇ ಜಾಸ್ತಿಯಾಗಿದೆ. ಸಾಧಾರಣವಾಗಿ ಕಡಿಮೆ ವಿದ್ಯಾವಂತರ ಸಂಖ್ಯೆಯೇ ಜಾಸ್ತಿಯಾಗಿದೆ. ಏನಾದರೂ ಹೇಳಿ ಜನಗಳ ಮತ್ತು ಸರಕಾರದ ಮನಸ್ಸನ್ನು ಕಲಕಿದರೆ ತಮ್ಮ ಕೆಲಸವಾಯಿತು ಎಂದು ಕೆಲವರು ಭಾವಿಸುತ್ತಾರೆ. ಆದರೆ ಸರಕಾರ ಈಗ ಜನಗಳ ಆರ್ಥಿಕಾಭಿವೃದ್ಧಿಯನ್ನು ಹೆಚ್ಚಿಸಲು ಪಾಂಚವಾರ್ಷಿಕ ಯೋಜನೆ ಮುಂತಾದ ಯೋಜನೆಗಳನ್ನು ಕೈಗೊಂಡಿರುವ ಉದ್ದೇಶವು ಸಹಾ ಅದೇ ಆಗಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚು ಮಾಡುವುದೂ ಮತ್ತು ಉದ್ಯೋಗಗಳನ್ನು ಹೆಚ್ಚುಹೆಚ್ಚಾಗಿ ಕಲ್ಪಿಸುವುದೂ ಇದರ ಉದ್ದೇಶವಾಗಿದೆ.

6.30 P.M.

ಇತರ ಕೆಲವು ವಿಷಯಗಳನ್ನು ಕೆಲವರು ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳುವಂತೆ ಈ ಅಂಕಿ ಅಂಶಗಳನ್ನು ರಾಜಕೀಯಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ...

ಶ್ರೀ ಎಂ. ಸಿ. ನರಸಿಂಹ.—ಇದರ ಸಂಬಂಧವಾಗಿ ಪ್ರಶ್ನೆಯನ್ನು ಕೇಳಿದವರು ನಾವಲ್ಲ. ಕಾಂಗ್ರೆಸ್ ಪಕ್ಷದ ಸದಸ್ಯರೇ.

ಶ್ರೀ ಎಸ್. ನಿಜಲಿಂಗಪ್ಪ.—ಸರಿಯಾದ ಒಂದು ದೃಷ್ಟಿಯಿಂದ ಪ್ರಶ್ನೆ ಕೇಳುತ್ತಾರೆ, ಅದಕ್ಕೆ ಸರಿಯಾದ ಉತ್ತರ ಬರುತ್ತದೆ. ಆದರೆ ಕೆಲವರು ಇದನ್ನು ರಾಜಕೀಯಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಾರೆ. ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ಒಂದು ಕೋಟಿ ಜನರಿಗೆ ಉದ್ಯೋಗ ಕಲ್ಪಿಸಿಕೊಡಬೇಕೆಂದಿದೆ. ಎಲ್ಲ ಮಟ್ಟಗಳಲ್ಲಿಯೂ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ, ನಿರುದ್ಯೋಗ

(ಶ್ರೀ ಎಸ್. ನಿಜಲಿಂಗಪ್ಪ)

ಎಲ್ಲದ್ದರೂ ಅಲ್ಲ ಉದ್ಯೋಗವನ್ನು ದೊರಕಿಸಿಕೊಡ ಬೇಕೆಂದು ಮಾಡಿದೆ. ಒಂದು ಯೋಜನೆ ಈಗ ಐದು ವರ್ಷ ನಡೆದಿದೆ. ಈ ಪ್ರಶ್ನೆಯನ್ನು ನಾನಾ ದೃಷ್ಟಿ ಗಳಿಂದ ಬಗೆಹರಿಸಬೇಕೇ ಏನಾ ಒಂದೇ ರೀತಿಯಲ್ಲಿ ಬಗೆಹರಿಸುವುದಕ್ಕಾಗುವುದಿಲ್ಲ. ಆದರೂ ಕೂಡ ಈಗ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ ಈ ದೆಶೆ ಯಲ್ಲಿ ಸಾಕಷ್ಟು ಕೆಲಸ ನಡೆದಿದೆ. ಅಂಕಿಅಂಶಗಳೇ ಇಲ್ಲದೆ ಕೆಲಸ ನಡೆಸುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು. ಈ ಕೆಲಸ ಎಷ್ಟೋ ದಿವಸಗಳಿಂದಲೂ ಇರಲಿಲ್ಲ, ಈಗ ಪ್ರಾರಂಭವಾಗಿದೆ. ಅಂಕಿಅಂಶ ಗಳನ್ನು ಶೇಖರಿಸಬೇಕೆಂದು ಹೇಳುವ ಉದ್ದೇಶವೇನೂ ತಪ್ಪಲ್ಲ. ಅಂಕಿಅಂಶಗಳು ಬರಲೆಂದು ಅಲ್ಲಿಯವರೆಗೆ ಉದ್ಯೋಗ ಕಲ್ಪಿಸುವ ಕಾರ್ಯವನ್ನು ನಿಲ್ಲಿಸಬೇಕೆಂದು ಅವರ ಉದ್ದೇಶವೆ ? ಇದು 'ಮದುವೆ ಆಗುವವರೆಗೆ ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಡುವವರೆಗೆ ಮದುವೆ ಆಗುವುದಿಲ್ಲ' ಎನ್ನುವ ಗಾದೆಯನ್ನು ಜ್ಞಾಪಕಕ್ಕೆ ತರು ತ್ತದೆ. ದೇಶದಲ್ಲಿ ನಿರುದ್ಯೋಗ ತಾನೇತಾನಾಗಿ ಕುಣಿಯುತ್ತಿದೆ. ಅನೇಕ ಜನರಿಗೆ ಕೆಲಸವಿಲ್ಲ. ಏಕೆಂದರೆ ಅನೇಕ ವ್ಯತ್ಯಾಸಗಳಾಗಿವೆ. ಹೀಗಿರುವಾಗ ಅಂಕಿಅಂಶಗಳನ್ನು ಶೇಖರಿಸಿ ತರಿಸಿದ ಮೇಲೆ ಮುಂದಿನ ಕೆಲಸ ಮಾಡೋಣ ಎಂದು ಕಾದು ನಿಲ್ಲು ವುದು ಬುದ್ಧಿವಂತಿಕೆಯ ಕೆಲಸವಲ್ಲ. ನಮ್ಮ ಕರ್ತವ್ಯ ವನ್ನು ನಾವು ಮಾಡಬೇಕು, ಪೀನಮೇಷ ಎಣಿ ಸುತ್ತಾ ಕುಳಿತುಕೊಳ್ಳಬಾರದು, ಕಾಲ ಕಳೆದು ಹೋಗುತ್ತದೆ. ದ್ವಿತೀಯ ಪಂಚವಾರ್ಷಿಕ ಯೋಜನೆ ಯಲ್ಲಿ ಸಾಕಷ್ಟು ಮಂದಿಗೆ ಉದ್ಯೋಗಗಳು ದೊರೆ ಯುತ್ತವೆ. ಶ್ರೀ ನರಸಿಂಹರೆಡ್ಡಿಯವರು ಭಯಪಡಲು ಕಾರಣವಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ನಾನಾ ರೀತಿಯಲ್ಲಿ ಪ್ರಯತ್ನಗಳು ನಡೆಯುತ್ತಿವೆ.

ಇನ್ನೊಂದು ವಿಚಾರ. Technological Development ಹೇಗೆ ಬೆಳೆಯುತ್ತಿದೆಯೋ ಹಾಗೆಯೇ ಒಂದು ರೀತಿಯಲ್ಲಿ ನಿರುದ್ಯೋಗವೂ ಬೆಳೆಯುತ್ತಿದೆ. ಹೆಚ್ಚು ಜನರಿಗೆ ಉದ್ಯೋಗ ದೊರಕಲು ಕೈಗಾರಿಕೆ ವಿಕೇಂದ್ರೀಕರಣವಾಗಬೇಕೆಂಬ ದೃಷ್ಟಿಯಿಂದ ಹಳ್ಳಿಗ ಳಲ್ಲಿ ಸಣ್ಣಸಣ್ಣ ಗ್ರಾಮೋದ್ಯಮಗಳನ್ನು ಹೆಚ್ಚಿಸ ಬೇಕೆಂದು ಮಾಡಿದ್ದೇವೆ. ಗ್ರಾಮೋದ್ಯೋಗಗಳು ಹೆಚ್ಚಿದರೆ ಹೆಚ್ಚು ಜನರಿಗೆ ಉದ್ಯೋಗ ದೊರಕುತ್ತ ದೆಂಬ ಉದ್ದೇಶದಿಂದ ಇದಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಒದಗಿಸಿದೆ. ನಮ್ಮ ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾಗಿದೆ, ಆದರೆ ಅನೇಕ ಕಾರಣಗಳಿಂದ ಉತ್ಪತ್ತಿ ಕಡಮೆಯಾಗಿದೆ. ಇಲ್ಲಿ ಬರಿಯ ವ್ಯವಸಾಯದಿಂದ ಎಲ್ಲರಿಗೂ ಕೆಲಸ ಸಿಕ್ಕುವುದಿಲ್ಲವೆಂಬ ದೃಷ್ಟಿಯಿಂದಲೂ ಕೈಗಾರಿಕೆ ವಿಕೇಂದ್ರೀಕರಣ ಮಾಡುವ ದೃಷ್ಟಿಯಿಂದಲೂ ಗ್ರಾಮ ಕೈಗಾರಿಕೆಗಳನ್ನು ಹೆಚ್ಚಿಸಲು ಪ್ರಯತ್ನ ನಡೆದಿದೆ.

ಈಗಿನ ವಿದ್ಯಾಭ್ಯಾಸದ ಕ್ರಮ ಮತ್ತು ರೀತಿನೀತಿ ಸರಿಯಾಗಿಲ್ಲವೆಂದು ಕೆಲವರು ಹೇಳಿದ್ದಾರೆ. ಇದನ್ನು ಒಂದೇ ದಿವಸದಲ್ಲಿ, ಒಂದೇ ಘಂಟೆಯಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ನಾನಾ ಕಾರಣಗಳಿಂದ, ನೂರಾರು ವರ್ಷಗಳಿಂದ ನಮ್ಮ ದೇಶದಲ್ಲಿರುವ ವಿದ್ಯಾಭ್ಯಾಸ ಪದ್ಧತಿಯಿಂದ ಜನರು ಹೆಚ್ಚು ಉದ್ಯೋಗ ಶೀಲರಾಗುವುದಕ್ಕೆ ಅವಕಾಶವಾಗಿಲ್ಲ, ಇದನ್ನು ಬದ ಲಾಯಿಸಬೇಕೆಂಬ ಉದ್ದೇಶದಿಂದ ಟೆಕ್ನಿಕಲ್ ಶಿಕ್ಷಣ ವನ್ನು ಹೆಚ್ಚಿಸಲಾಗುತ್ತಿದೆ. ದೊಡ್ಡ ಕೈಗಾರಿಕೆಗಳಿಗೆ ಅಗತ್ಯವಾದ ಸಣ್ಣಪುಟ್ಟ ವಸ್ತುಗಳನ್ನು ತಯಾರಿಸಲು ನಮ್ಮ ರಾಜ್ಯದಲ್ಲಿ ಹತ್ತುಹನ್ನೆರಡು 'ಇಂಡಸ್ಟ್ರಿಯಲ್ ಎಸ್ಟೇಟ್ಸ್' ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಬೆಂಗಳೂರು, ಮೈಸೂರು, ದಾವಣಗೆರೆ, ಹರಿಹರು ಬೆಳಗಾಂ ಮುಂತಾದ ಸ್ಥಳಗಳಲ್ಲಿ ಇವನ್ನು ಸ್ಥಾಪಿ ಸಲು ಸಾಕಷ್ಟು ಹಣವನ್ನೊದಗಿಸಲಾಗಿದೆ. ಇದರ ಮೂಲಕ ಹೆಚ್ಚು ಜನರಿಗೆ ಉದ್ಯೋಗ ದೊರಕಿಸಿಕೊಡ ಬೇಕೆಂಬ ಉದ್ದೇಶದಿಂದ ಕೆಲಸ ಮಾಡುತ್ತಿದ್ದೇವೆ. ಇನ್ನು ಹೆಚ್ಚು ವಿವರಗಳನ್ನು ಹೇಳಲು ನನಗೆ ಕಾಲ ವಿಲ್ಲವೆಂದು ಕಾಣುತ್ತದೆ, ಹತ್ತು ನಿಮಿಷ ಮಾತ್ರ ನನಗೆ ಅವಕಾಶ ಸಿಕ್ಕಿತು. ಒಟ್ಟಿನಲ್ಲಿ, ಎಲ್ಲ ಸಮಸ್ಯೆ ಗಳಿಗಿಂತಲೂ ನಿರುದ್ಯೋಗ ಸಮಸ್ಯೆ ದೊಡ್ಡದು ಎಂಬುದನ್ನು ಸರ್ಕಾರ ಗಮನಿಸಿ, ಇದನ್ನು ನಿವಾರಣೆ ಮಾಡುವುದಕ್ಕಾಗಿ, ಹಳ್ಳಿಗಳಲ್ಲಿಯೂ ಪಟ್ಟಣಗಳ ಲ್ಲಿಯೂ ಸಣ್ಣಸಣ್ಣ ಊರುಗಳಲ್ಲಿಯೂ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಯತ್ನ ಮಾಡು ತ್ತಿದ್ದಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri Y. VEERAPPA —Have the Planning Commission constituted a Study Group ?

Sri S. NIJALINGAPPA.—I think questions are not permitted after a reply is given to the half-an-hour discussion.

Sri A. V. NARASIMHA REDDY (Bangalore South).—I rise to a point of order. On page 13, clause 39, various stages of dealing with this subject of half hour discussion, have been laid down. In the last clause it is stated :

> "There shall be no formal motion before the Assembly nor voting. The member who has given notice may make a short statement and the Minister concerned shall reply briefly. Any member who has previously intimated to the Speaker may be permitted to put a question for the purpose of further elucidating any matter of fact."

I would like to know from the Speaker whether prior permission has been granted to the member to put question.

Sri Y. VEERAPPA.—The Speaker has given me permission to ask questions after the reply by the Chief Minister.

Mr. DEPUTY SPEAKER.—Both Members, Sri Y. Veerappa and Sri C. Rajaiah Setty, have taken permission.

Sri K. PUTTASWAMY.—On a point of order. The question is, half-hour discussion. May I know whether half-hour is not over ?

Sri A. V. NARASIMHA REDDY.— It is only one member that can be permit

ted even in case if the Chair were to give permission.

Mr. DEPUTY SPEAKER.—Two members can be allowed to put questions after the Minister's reply. I think a reply can be given when permission has been sought.

Sri Y. VEERAPPA.—Have the Planning Commission of the Government of India constituted a Study Group on the point of educated unemployed?

Sri S. NIJALINGAPPA.—I am sure the Planning Commission has made a lot of study of that question.

Sri Y. VEERAPPA.—May I know...

Mr. DEPUTY SPEAKER.—Only one question is allowed.

Sri C. K. RAJAIAH SETTY.—Sir, can the Government think of devising a method to train our students studying in S.S.L.C. in the subjects like smithy, carpentry, etc., as we have got facilities for giving such training in view of the fact that we are having a number of factories?

Sri S. NIJALINGAPPA.—In fact most of the factories have got persons who have passed S.S.L.C. and they are being encouraged to learn work. If my friend gotr there he will know it. If the Hon'ble Member has got any concrete suggestion to make, I will certainly look into it.

Mr. DEPUTY SPEAKER.—The House will now rise and meet at 1 P.M. tomorrow.

The House adjourned at Forty-two Minutes past Six of the Clock to meet again at One of the Clock on 25th July 1957.